# Teachingninja.in

- Latest Govt Job updates
- Private Job updates
- Free Mock tests available

Visit - teachingninja.in

# Karnataka
# High Court

## Previous Year Paper
### (Mains) District Judge
### (Civil Law) 16 Sep 2018

Teachingninja.in

**HIGH COURT OF KARNATAKA**
ಕರ್ನಾಟಕ ಉಚ್ಚ ನ್ಯಾಯಾಲಯ

**MAIN WRITTEN EXAMINATION FOR RECRUITMENT TO THE POSTS OF DISTRICT JUDGES**
ಜಿಲ್ಲಾ ನ್ಯಾಯಾಧೀಶರುಗಳ ಹುದ್ದೆಗಳ ನೇಮಕಾತಿಯ ಮುಖ್ಯ ಲಿಖಿತ ಪರೀಕ್ಷೆ

**CIVIL LAW**
ದಿವಾಣಿ ಕಾನೂನು

**QUESTION PAPER**
ಪ್ರಶ್ನೆ ಪತ್ರಿಕೆ

**Date: 16.09.2018**
ದಿನಾಂಕ:16ನೇ ಸೆಪ್ಟೆಂಬರ್ 2018

**Max. Marks: 150**
ಗರಿಷ್ಠ ಅಂಕಗಳು: 150

**TIME: 10.00 am to 1.00 pm**
ಸಮಯ: ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.00 ಘಂಟೆ

**INSTRUCTIONS TO CANDIDATES:**
ಅಭ್ಯರ್ಥಿಗಳಿಗೆ ಸೂಚನೆಗಳು

1) *The candidates should note Rule 5(b) of the Karnataka Judicial Service (Recruitment) (Amendment) Rules, 2016 that reads as under:*

*Main Examination:*

*The Competitive Written Examination for recruitment of District Judges shall consist of:-*

(i) *Written Examination of two papers each of three hours duration with 150 maximum marks of each paper-one in Civil Law and another in Criminal Law.*

(ii) *It is compulsory for all candidates to answer at least one of the paper in English language and in so far as the other paper is concerned, it shall be optional for the candidates to answer the same either in English or in Kannada in which event the said paper shall be answered entirely in the language in which option is exercised.*



Teachingninja.in

1) ಕರ್ನಾಟಕ ನ್ಯಾಯಿಕ ಸೇವಾ (ನೇಮಕಾತಿ) (ತಿದ್ದುಪಡಿ) ನಿಯಮಗಳು 2016ರ ನಿಯಮ 5(ಬಿ)ಯನ್ನು ಈ ಕೆಳಗಿನಂತೆ ಓದಲಾಗುವುದು ಎಂದು ಅಭ್ಯರ್ಥಿಗಳು ಗಮನಿಸತಕ್ಕದ್ದು:

ಮುಖ್ಯ ಪರೀಕ್ಷೆ:
ಜಿಲ್ಲಾ ನ್ಯಾಯಾಧೀಶರ ನೇಮಕಾತಿಯಲ್ಲಿ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯು ಒಳಗೊಂಡಿದ್ದು:-

(i) ಲಿಖಿತ ಪರೀಕ್ಷೆಯು ಎರಡು ಪತ್ರಿಕೆಯದಾಗಿದ್ದು ತಲಾ ಮೂರು ಗಂಟೆ ಅವಧಿಯ ಪ್ರತಿ ಪತ್ರಿಕೆಯು 150 ಗರಿಷ್ಠ ಅಂಕಗಳು ಉಳ್ಳದ್ದು – ಒಂದು ದಿವಾಣಿ ಕಾನೂನು ಮತ್ತೊಂದು ಅಪರಾಧಿಕ ಕಾನೂನುದಾಗಿರುತ್ತದೆ.

(ii) ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಕನಿಷ್ಟ ಪಕ್ಷ ಒಂದು ಪತ್ರಿಕೆಯನ್ನು ಆಂಗ್ಲ ಭಾಷೆಯಲ್ಲಿ ಉತ್ತರಿಸಬೇಕಾಗುವುದು ಮತ್ತು ಮತ್ತೊಂದು ಪತ್ರಿಕೆಗೆ ಸಂಬಂಧಿಸಿದಂತೆ ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ, ಆ ಸಂದರ್ಭದಲ್ಲಿ ಆ ಪತ್ರಿಕೆಯನ್ನು ಪೂರ್ತಿ ಆಯ್ಕೆ ಮಾಡಿದ ಭಾಷೆಯಲ್ಲಿ ಉತ್ತರಿಸತಕ್ಕದ್ದು.

**2) If there is any difference in questions in English language and Kannada language, question framed in English language shall prevail.**

ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ

**3) All questions are Compulsory**

ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿದೆ

**1. Frame the issues and write a judgment on the following facts:** **30**

ಕೆಳಗಿನ ಸಂಗತಿಗಳ ಮೇಲೆ ವಿವಾದಾಂಶಗಳನ್ನು ರೂಪಿಸಿರಿ ಮತ್ತು ತೀರ್ಪು ಬರೆಯಿರಿ:

*Note: a) The facts should be stated in brief and not reproduced verbatim*

ಸಂಗತಿಗಳನ್ನು ಸಂಕ್ಷಿಪ್ತವಾಗಿ ಹೇಳತಕ್ಕದ್ದು ಮತ್ತು ಶಬ್ದಶಃ ಪುನರುತ್ಪಾದನೆ ಮಾಡಬಾರದು

*b) It should be presumed that necessary witnesses have been examined to support the case.*

ಪ್ರಕರಣವನ್ನು ಸಮರ್ಥಿಸುವ ಎಲ್ಲಾ ಅಗತ್ಯ ಸಾಕ್ಷಿಗಳನ್ನು ವಿಚಾರಣೆ ಮಾಡಿದ್ದಾರೆಂದು ಭಾವಿಸತಕ್ಕದ್ದು.

*c) That necessary and relevant documents have been produced.*

ಅಗತ್ಯ ಮತ್ತು ಸುಸಂಬದ್ಧ ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾರೆ.



Teachingninja.in

It is the case of the plaintiff that defendant Nos.1 and 2 are the owners of the suit-land bearing Sy.No.55, admeasuring 2 acres, situated within the local limits of village Rampura, Taluka and District Hanumanthanagar. The defendants gave the suit-land to the plaintiff for cultivation on crop-share basis for a period of 5 years i.e., from 1991-92 to 1995-96 by executing an agreement in his favour on 20.04.1991. The plaintiff was put in possession of the suit-land. He continued to be in possession of the suit-land even after the expiry of the period of five years. The defendants restrained the plaintiff from cultivating the suit-land on 15.09.1998. It is the contention of the plaintiff that he is in lawful and settled possession of the suit-land and that the defendants cannot dispossess him therefrom without due process of law. The plaintiff, therefore, filed the suit seeking the relief of perpetual injunction to restrain the defendants from disturbing his possession over the suit-land without due process of law.

The defendants filed written statement and opposed the claim of the plaintiff. They denied that they have delivered possession of the suit-land to the plaintiff for cultivation on crop-share basis, as claimed by him. They denied execution of an agreement in favour of the plaintiff. According to them, they are actually cultivating the suit-land and that the plaintiff is their agricultural-labourer. They were paying labour charges to the plaintiff. According to them, the plaintiff cannot seek the equitable relief of injunction against them since they are the rightful owners of the suit-land. On these grounds, they prayed that the suit may be dismissed with costs.

ಹನುಮಂತನಗರ ಜಿಲ್ಲೆ ಮತ್ತು ತಾಲ್ಲೂಕು, ರಾಂಪುರ ಗ್ರಾಮದ ಸ್ಥಳೀಯ ವ್ಯಾಪ್ತಿಯಲ್ಲಿ ಇರುವ ಸರ್ವೆ ನಂ.55ರಲ್ಲಿ ಎರಡು ಎಕರೆ ವಿಸ್ತೀರ್ಣದ ದಾವಾ ಜಮೀನಿಗೆ 1 ಮತ್ತು 2ನೇ ಪ್ರತಿವಾದಿಯರು ಮಾಲೀಕರಾಗಿರುತ್ತಾರೆಂದು ವಾದಿಯ ಪ್ರಕರಣವಾಗಿರುತ್ತದೆ. ಪ್ರತಿವಾದಿಯರು ದಾವಾ



Teachingninja.in

ಜಮೀನನ್ನು ವಾದಿಗೆ ದಿನಾಂಕ 20.04.1991ರಂದು ಕರಾರು ಪತ್ರ ಬರೆದು ಕೊಟ್ಟು ಬೆಳೆ ಪಾಲಿನ ಆಧಾರದ ಮೇರೆಗೆ 5 ವರ್ಷಗಳ ಅವಧಿಗೆ ಅಂದರೆ 1991–1992ರಿಂದ 1995–1996ರವರೆಗೆ ಸಾಗುವಳಿ ಮಾಡಲು ಕೊಟ್ಟಿರುತ್ತಾರೆ. ವಾದಿಯನ್ನು ದಾವಾ ಜಮೀನಿನ ಸ್ವಾಧೀನಕ್ಕೆ ಹಾಕಲಾಗಿತ್ತು. ಅವನು 5 ವರ್ಷ ಅವಧಿ ಮುಗಿದ ನಂತರವೂ ದಾವಾ ಜಮೀನಿನ ಸ್ವಾಧೀನವನ್ನು ಮುಂದುವರಿಸಿದನು. 15.09.1998ರಂದು ದಾವಾ ಜಮೀನನ್ನು ವಾದಿ ಸಾಗುವಳಿ ಮಾಡುವಾಗ ಪ್ರತಿವಾದಿಯರು ತಡೆ ಮಾಡಿದರು. ದಾವಾ ಜಮೀನಿನ ಕಾನೂನಾತ್ಮಕ ಮತ್ತು ಸ್ಥಾಪಿತವಾದ ಸ್ವಾಧೀನದಲ್ಲಿದ್ದೇನೆಂದು ಮತ್ತು ಪ್ರತಿವಾದಿಯರು ಕಾನೂನಿನ ಯುಕ್ತ ಕ್ರಮವಲ್ಲದೆ ದಾವಾ ಜಮೀನಿನಿಂದ ಸ್ವಾಧೀನ ತಪ್ಪಿಸಲು ಬರುವುದಿಲ್ಲ ಎಂದು ವಾದಿಯ ವಾದವಾಗಿದೆ. ಆದ್ದರಿಂದ ದಾವಾ ಜಮೀನಿನ ಸ್ವಾಧೀನಕ್ಕೆ ಕಾನೂನು ಯುಕ್ತ ಕ್ರಮವಲ್ಲದೆ ತೊಂದರೆ ಪಡಿಸಿದಂತೆ ಪ್ರತಿವಾದಿಯರನ್ನು ನಿಯಂತ್ರಿಸಲು ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರ ಕೋರಿ ವಾದಿಯು ದಾವೆ ಸಲ್ಲಿಸಿರುತ್ತಾನೆ.

ಪ್ರತಿವಾದಿಯರು ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ ಮತ್ತು ವಾದಿಯ ಕ್ಲೇಮನ್ನು ವಿರೋಧಿಸಿರುತ್ತಾರೆ. ವಾದಿ ಹೇಳಿದಂತೆ ದಾವಾ ಜಮೀನನ್ನು ಬೆಳೆ ಪಾಲಿನ ಆಧಾರದ ಮೇಲೆ ಸಾಗುವಳಿ ಮಾಡಲು ವಾದಿಗೆ ಅವರು ಸ್ವಾಧೀನವನ್ನು ಕೊಟ್ಟಿರುತ್ತಾರೆಂದು ನಿರಾಕರಿಸಿರುತ್ತಾರೆ. ವಾದಿಗೆ ಕರಾರು ಪತ್ರವನ್ನು ಬರೆದು ಕೊಟ್ಟಿದ್ದಾರೆಂದು ನಿರಾಕರಿಸಿರುತ್ತಾರೆ. ಅವರ ಪ್ರಕಾರ ದಾವಾ ಜಮೀನನ್ನು ಅವರು ವಾಸ್ತವವಾಗಿ ಸಾಗುವಳಿ ಮಾಡುತ್ತಿದ್ದಾರೆ ಮತ್ತು ವಾದಿಯು ಅವರ ಕೃಷಿ ಕಾರ್ಮಿಕನಾಗಿರುತ್ತಾನೆ. ಅವರು ವಾದಿಗೆ ಕೂಲಿ ಹಣವನ್ನು ಕೊಡುತ್ತಿದ್ದರು. ಅವರ ಪ್ರಕಾರ ಅವರು ದಾವಾ ಜಮೀನಿನ ಕಾನೂನಾತ್ಮಕ ಮಾಲೀಕರಾಗಿರುವುದರಿಂದ ಅವರ ವಿರುದ್ಧ ವಾದಿಗೆ ನ್ಯಾಯ ಸಮ್ಮತವಾದ ನಿರ್ಬಂಧಕಾಜ್ಞೆ ಪರಿಹಾರ ಪಡೆಯಲು ಬರುವುದಿಲ್ಲ. ಈ ಕಾರಣಗಳಿಂದ ದಾವೆಯನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

**2. Translate the following passage from English to Kannada:** **15**

It is also settled by various decisions of this Court that by virtue of Section 20 of the Act, the relief for specific performance lies in the discretion of the Court and the Court is not bound to grant such relief merely because it is lawful to do so. The exercise of the discretion to order specific performance would require the Court to satisfy itself that the circumstances are such that it is equitable to grant decree for specific performance of the contract. While exercising the discretion, the court would take into consideration the circumstances of the case, the conduct of the parties and their respective



Teachingninja.in

interest under the contract. No specific performance of a contract, though it is not vitiated by fraud or misrepresentation, can be granted if it would give an unfair advantage to the plaintiff and where the performance of the contract would involve some hardship on the defendant, which he did not foresee. In other words, the courts' discretion to grant specific performance is not exercised if the contract is not equal and fair, although the contract is not void.

**3. Translate the following passage from Kannada to English:** **15**

ದಿನಾಂಕ 07.06.2009 ರಂದು ಎನ್.ಟಿ.ರಸ್ತೆಯಲ್ಲಿ ಪೆಟ್ರೋಲ್ ಬಂಕ್ ಬಳಿಯಿರುವ ಹಿಟ್ಟಿನ ಗಿರಣಿ ಕಡೆಗೆ ತನ್ನ ಮನೆಯಿಂದ ಕೆಎ 14/ಕೆ 9726ರ ನೊಂದಣಿ ಪ್ರಮಾಣ ಪತ್ರ ಹೊಂದಿರುವ ತನ್ನ ಟಿ.ವಿ.ಎಸ್. ಎಕ್ಸ್‌ಎಲ್ ಅನ್ನು ಸವಾರಿ ಮಾಡಿಕೊಂಡು ಹೋಗುತ್ತಿರುವಾಗ ಆಪಾದಿಸಿರುವಂತೆ ಎರಡನೇ ಎದುರುದಾರ/ ಹಬೀಬುಲ್ಲಾ ಖಾನನು ಸಂದೇಶ್ ಮೋಟಾರ್ಸ್ ಕಡೆಯಿಂದ ಅತೀವೇಗವಾಗಿ, ದುಡುಕು ಮತ್ತು ನಿರ್ಲಕ್ಷ ರೀತಿಯಲ್ಲಿ ಕೆಎ14/ಡಬ್ಲ್ಯೂ 8664 ನೋಂದಣಿ ಪ್ರಮಾಣ ಪತ್ರವನ್ನು ಹೊಂದಿರುವ ಹೀರೋ ಹೊಂಡಾ ಸ್ಪ್ಲೆಂಡರ್ ಮೋಟಾರು ಸೈಕಲನ್ನು ಸವಾರಿ ಮಾಡಿಕೊಂಡು ಟಿ.ವಿ.ಎಸ್. ಮೊಪೆಡ್‌ಗೆ ಡಿಕ್ಕಿ ಹೊಡೆದು, ಆ ಕಾರಣದಿಂದ 1ನೇ ಎದುರುದಾರನು ವಾಹನದಿಂದ ಕೆಳಗಡೆ ಬಿದ್ದು ಗಾಯಗೊಂಡಿರುತ್ತಾನೆ ಮತ್ತು ಆತನನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಿ, ಆನಂತರ ಅಲ್ಲಿಂದ ನಂಜಪ್ಪ ಆಸ್ಪತ್ರೆಗೆ ವರ್ಗಾಯಿಸಲಾಗಿತ್ತು ಮತ್ತು ಅಲ್ಲಿಂದ ಮಣಿಪಾಲ ಕೆ.ಎಂ.ಸಿ. ಆಸ್ಪತ್ರೆಗೆ ಸೇರಿಸಿ ಅಲ್ಲಿ ಒಂದು ತಿಂಗಳವರೆಗೆ ಚಿಕಿತ್ಸೆಯನ್ನು ವಿಸ್ತರಿಸಲಾಗಿತ್ತು ಮತ್ತು ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ಚಿಕಿತ್ಸೆಯನ್ನು ಮುಂದುವರೆಸಲಾಗಿತ್ತು ಎಂದು ಆಪಾದಿಸಿ ರಸ್ತೆ ಸಂಚಾರ ಅಪಘಾತದಲ್ಲಿ ಆದ ಗಾಯಗಳ ಸಂಬಂಧದಲ್ಲಿ ನಷ್ಟ ಪರಿಹಾರವೆಂದು 13,15,000/- ರೂಪಾಯಿಗಳನ್ನು ಕೋರಿ ಮೋಟಾರು ವಾಹನ ಅಧಿನಿಯಮ 1988ರ 166ನೇ ಕಲಂ ಅನ್ನು ಅನ್ವಯಿಸಿ 1ನೇ ಎದುರುದಾರ ಕ್ಲೇಮು ಅರ್ಜಿಯನ್ನು ಹೂಡಿದ್ದಾನೆ.

**4.** 'Preamble to the Constitution contains basic structure, which cannot be amended under Article 368 of the Constitution of India'. Explain with leading judgments. **10**

'ಸಂವಿಧಾನದ ಪ್ರಸ್ತಾವನೆ ಮೂಲ ರಚನೆಯನ್ನು ಒಳಗೊಂಡಿದ್ದು, ಭಾರತ ಸಂವಿಧಾನದ ಅನುಚ್ಛೇದ 368ರ ಅಡಿಯಲ್ಲಿ ತಿದ್ದುಪಡಿ ಮಾಡಲು ಬರುವುದಿಲ್ಲ'. ಪ್ರಮುಖ ತೀರ್ಪುಗಳನ್ನು ಉಲ್ಲೇಖಿಸಿ ವಿವರಿಸಿ.



Teachingninja.in

**5.** Enumerate and discuss various types of transfer of property as contemplated under the Transfer of Property Act, 1882. **10**

ಸ್ವತ್ತು ವರ್ಗಾವಣೆ ಅಧಿನಿಯಮ, 1882ರಡಿಯಲ್ಲಿ ಪರಿಗಣಿಸಿದ್ದ ವಿವಿಧ ಆಸ್ತಿ ವರ್ಗಾವಣೆ ವಿಧಗಳನ್ನು ಪಟ್ಟಿಮಾಡಿ ಚರ್ಚಿಸಿ.

**6.** Does a fresh suit lie in respect of the same cause of action in the following cases? Explain. **10**

a) Where plaintiff has failed to sue for the entire claim in former suit.

b) Where the former suit is dismissed for non-appearance of plaintiff on the date when defendant is present in the Court.

c) Where the former suit abates on account of death of defendant, where legal representatives have not been brought on record.

ಕೆಳಗೆ ನಮೂದಿಸಿರುವ ಪ್ರಕರಣಗಳಲ್ಲಿ ಏಕ ಪ್ರಕಾರದ ದಾವಾ ಕಾರಣದ ಮೇಲೆ ಹೊಸ ದಾವೆ ನಿಲ್ಲಬಹುದೇ? ವಿವರಿಸಿ.

ಎ) ಭೂತಪೂರ್ವ ದಾವೆಯಲ್ಲಿ ಪೂರ್ಣ ಪ್ರಮಾಣದ ಪರಿಹಾರವನ್ನು ಕೇಳಲು ವಾದಿ ವಿಫಲನಾಗಿದ್ದಲ್ಲಿ.

ಬಿ) ಭೂತಪೂರ್ವ ದಾವೆಯಲ್ಲಿ ಪ್ರತಿವಾದಿ ನ್ಯಾಯಲಯಕ್ಕೆ ಹಾಜರಾದ ದಿನಾಂಕದಂದು ವಾದಿ ಹಾಜರಾಗದೆ ದಾವೆ ವಜಾಗೊಂಡಾಗ.

ಸಿ) ಭೂತಪೂರ್ವ ದಾವೆಯಲ್ಲಿ ಪ್ರತಿವಾದಿ ಮರಣ ಹೊಂದಿದಾಗ ಕಾನೂನು ಸಮ್ಮತ ಪ್ರತಿನಿಧಿಯನ್ನು ದಾಖಲೆಯಲ್ಲಿ ತರದೆ ದಾವೆ ಉಪಶಮನಗೊಂಡಾಗ.

**7.** Critically examine and discuss the provisions relating to 'privileged communication' under Section 123 and 124 of the Indian Evidence Act, 1872. **10**

ಭಾರತ ಸಾಕ್ಷ್ಯ ಅಧಿನಿಯಮ, 1872ರ ಕಲಂ 123 ಮತ್ತು 124ರ ಅಡಿಯಲ್ಲಿ ವಿಶೇಷ ಹಕ್ಕುಳ್ಳ ಸಂವಹನಕ್ಕೆ ಸಂಬಂಧಿಸಿದ ಉಪಬಂಧಗಳನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸಿ ಮತ್ತು ಚರ್ಚಿಸಿ.

**8.** Under what circumstances, time can be excluded in computing the period of limitation in filing a case. Explain with reference to the relevant provisions of the Limitation Act, 1963. **10**



Teachingninja.in

ಒಂದು ಪ್ರಕರಣ ಸಲ್ಲಿಸಲು ಕಾನೂನಿನಡಿಯಲ್ಲಿ ನಿಗಧಿಗೊಳಿಸಲ್ಪಟ್ಟ ಕಾಲಮಿತಿಯನ್ನು ಗಣಿಸುವಾಗ ಯಾವ ಸನ್ನಿವೇಶಗಳಲ್ಲಿ ಕಳೆದ ಅವಧಿಯನ್ನು ಹೊರತುಪಡಿಸಬಹುದು. ಕಾಲಪರಿಮಿತಿ ಅಧಿನಿಯಮ. 1963ರ ಸುಸಂಬದ್ಧ ನಿಬಂಧನೆಗಳನ್ನು ಉಲ್ಲೇಖಿಸಿ ವಿವರಿಸಿ.

**9.** The liability of surety is co-extensive with that of the principal debtor. Explain and discuss with one case law. **10**

ಜಾಮೀನುದಾರನ ಹೊಣೆಯು ಪ್ರಧಾನ ಋಣಿಯ ಹೊಣೆಯೊಡನೆ ಸಮವ್ಯಾಪಕವಾಗಿರುತ್ತದೆ. ಒಂದು ತೀರ್ಪುಜನ್ಯ ಕಾನೂನಿನ ಜೊತೆಗೆ ವಿವರಿಸಿ ಮತ್ತು ಚರ್ಚಿಸಿ.

**10.** What is the importance of 'readiness and willingness to perform' in a suit for specific performance? What is the consequence, if the plaintiff fails to plead his 'readiness and willingness to perform' in the plaint? **10**

ನಿರ್ದಿಷ್ಟ ನೆರವೇರಿಕೆ ದಾವೆಯಲ್ಲಿ 'ನೆರವೇರಿಸಲು ಸಿದ್ಧನಾಗಿರುವುದು ಮತ್ತು ಇಚ್ಛಿಸಿರುವುದು' ಇದರ ಪ್ರಾಮುಖ್ಯತೆ ಏನು? 'ನೆರವೇರಿಸಲು ಸಿದ್ಧನಾಗಿರುವುದು ಮತ್ತು ಇಚ್ಛಿಸಿರುವುದು' ಎಂಬ ಉಕ್ತಿಯನ್ನು ದಾವಾ ಪತ್ರದಲ್ಲಿ ಹೇಳಲು ವಾದಿ ವಿಫಲನಾದಲ್ಲಿ ಪರಿಣಾಮವೇನು?

**11.** What are the essential elements of a contract? Distinguish between void and voidable contract. **10**

ಕರಾರಿನ ಅವಶ್ಯಕ ಅಂಶಗಳು ಯಾವುವು? ಶೂನ್ಯ ಮತ್ತು ಶೂನ್ಯಕರಣೀಯ ಕರಾರುಗಳನ್ನು ವ್ಯತ್ಯಾಸಿಸಿ.

**12.** State the grounds for seeking decree for dissolution of marriage under Section 13 of the Hindu Marriage Act, 1955. **10**

ಹಿಂದೂ ವಿವಾಹ ಅಧಿನಿಯಮ, 1955ರ ಕಲಂ 13ರ ಅಡಿಯಲ್ಲಿ ವಿವಾಹ ವಿಚ್ಛೇದನದ ಡಿಕ್ರಿ ಪಡೆಯಲು ಇರುವ ಕಾರಣಗಳನ್ನು ವಿವರಿಸಿ.

---



Teachingninja.in